ಸಿಂಧ್ಯರವರು ಮಂತ್ರಿಯಾದ ಮೇಲೆ ಈ ಬಸ್‌ಗಳನ್ನು ಓಡಿಸುವುದನ್ನು ನಿಲ್ಲಿಸಲಾಯಿತು, ಕಾರಣ ಏನು ಎಂಬುದು ಗೊತ್ತಾಗಲಿಲ್ಲ? ಎರಡನೆಯದಾಗಿ ಚಾಮರಾಜನಗರದಲ್ಲಿ ಹಿಂದೆ ಮಾನ್ಯ ಭೀಮಣ್ಣ ಖಂಡ್ರೆಯವರು ಸಚಿವರಾಗಿದ್ದಾಗ ಬಸ್ ಡಿಪೋ ಮಾಡಬೇಕೆಂದು ತೀರ್ಮಾನವನ್ನು ಕೈಗೊಂಡಿದ್ದರು. ಇದು ಆದ ನಂತರ ಅನೇಕ ಮನವಿಗಳನ್ನು ಸಲ್ಲಿಸಲಾಗಿತ್ತು ಮತ್ತು ತಮಗೂ ಒಂದು ಪತ್ರವನ್ನು ಬರೆದಿದ್ದೇನೆ, ಆದರೆ ನೀವು ಉತ್ತರದಲ್ಲಿ ಯಾವುದೇ ಮನವಿ ಬಂದಿಲ್ಲವೆಂದು ಹೇಳಿದ್ದೀರಿ. ಚಾಮರಾಜನಗರದಲ್ಲಿ ಬಸ್ ಡಿಪೋವನ್ನು ಪ್ರಾರಂಭ ಮಾಡಲು ಶಂಕು ಸ್ಥಾಪನೆಗೆ ವ್ಯವಸ್ಥೆ ಮಾಡುತ್ತೀರಿ ಮತ್ತು ಅದಕ್ಕೆ ಹಣಕಾಸಿನ ವ್ಯವಸ್ಥೆ ಮಾಡಿ ಕೂಡಲೇ ಪ್ರಾರಂಭಿಸುವಂತೆ ತಾವು ಭರವಸೆಯನ್ನು ಯಾವಾಗ ಕೊಡುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ– ಮಾನ್ಯ ಅಧ್ಯಕ್ಷರೆ, ಚಾಮರಾಜನಗರದಲ್ಲಿ ಸಿಟಿ ಬಸ್‌ಗಳನ್ನು ಓಡಿಸುವುದಕ್ಕೆ ಸಾಧ್ಯವಿಲ್ಲ. ಕಾರಣ ಏನೆಂದರೆ ಅದು ರಾಷ್ಟ್ರೀಕೃತ ಆಗಿರತಕ್ಕಂಥ ಏರಿಯಾ ಅಲ್ಲ. ಖಾಸಗಿ ಬಸ್‌ಗಳು ಓಡತಕ್ಕಂಥ ಏರಿಯಾ. ಮಾನ್ಯ ಸದಸ್ಯರು ಹೇಳಿರುವ ಐದು ಬಸ್‌ಗಳನ್ನು ಏಕೆ ನಿಲ್ಲಿಸಿದ್ದಾರೆ ಅದರ ಬಗ್ಗೆ ವಿಚಾರಿಸುತ್ತೇನೆ. ಈ ರೀತಿ ಏನಾದರೂ ನಿಲ್ಲಿಸಿದ್ದರೆ ಮತ್ತೆ ಪ್ರಾರಂಭ ಮಾಡಲಿಕ್ಕೆ ನಾನು ಅವರಿಗೆ ಸೂಚನೆಯನ್ನು ಕೊಡುತ್ತೇನೆ. ಎರಡನೇಯದಾಗಿ ಮಾನ್ಯ ಸದಸ್ಯರು ಡಿಪೋ ಆಗಬೇಕೆಂದು ಪತ್ರ ಬರೆದಿರುವುದು ನಿಜ. 1998-99ನೇ ಸಾಲಿನಲ್ಲಿ ಅಂದರೆ ಈ ವರ್ಷದಲ್ಲಿ ಡಿಪೋವನ್ನು ಮಂಜೂರು ಮಾಡಲು ನಾನು ಒಪ್ಪಿಗೆಯನ್ನು ಕೊಟ್ಟಿದ್ದೇನೆ.

ತೋಟಗಾರಿಕೆಗೆ ಪ್ರೋತ್ಸಾಹ ನೀಡುವುದು

58 (198) ಶ್ರೀ ಬಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ನಬಾರ್ಡ್ ನೆರವಿನೊಂದಿಗೆ ಸಣ್ಣ ಮತ್ತು ಅತಿಸಣ್ಣ ರೈತರಿಗೆ ತೋಟಗಾರಿಕೆ ಬೆಳೆಯನ್ನು ಬೆಳೆಯುವಂತೆ ಪ್ರೋತ್ಸಾಹಿಸಲು ಕಳೆದ 3 ವರ್ಷಗಳಿಂದ ಎಷ್ಟು ಹಣವನ್ನು ಸಾಲವನ್ನಾಗಿ ನೀಡಲಾಗಿದೆ.

2. ಈ ಯೋಜನೆಯಡಿ ಫಲಾನುಭವಿಗಳಾದವರ ಸಂಖ್ಯೆ:ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು).

3. ಯಾವ ಯಾವ ಬೆಳೆಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು)

1. ನಬಾರ್ಡ್ ನೆರವಿನೊಂದಿಗೆ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮೂಲಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತೋಟಗಾರಿಕೆ ಬೆಳೆಯನ್ನು ಬೆಳೆಯಲು ಪ್ರೋತ್ಸಾಹ ನೀಡುವುದಕ್ಕಾಗಿ ಕಳೆದ 3 ವರ್ಷಗಳಿಂದ ಅಂದರೆ 1994-95, 95-96, ಮತ್ತು 96-97ರಲ್ಲಿ ಒಟ್ಟು 5640 ಲಕ್ಷ ರೂ. ಗಳನ್ನು ಸಾಲವನ್ನಾಗಿ ನೀಡಲಾಗಿದೆ.

2. ಈ ಯೋಜನೆಯಡಿ 13793 ಫಲಾನುಭವಿಗಳಾಗಿರುತ್ತಾರೆ (ಜಿಲ್ಲಾವಾರು ಮಾಹಿತಿ ಕೆಳಕಂಡಂತಿದೆ)

1.	ಬೆಂಗಳೂರು	540
2.	ಕೋಲಾರ	517
3.	ತುಮಕೂರು	2229
4.	ಚಿತ್ರದುರ್ಗ	1460
5.	ಶಿವಮೊಗ್ಗ	1774
6.	ಮೈಸೂರು	1089
7.	ಕೊಡಗು	109
8.	ಮಂಡ್ಯ	404
9.	ಹಾಸನ	1273
10.	ಚಿಕ್ಕಮಗಳೂರು	1278
11.	ದಕ್ಷಿಣ ಕನ್ನಡ	1102
12.	ಬೆಳಗಾಂ	242
13.	ಬಿಜಾಪುರ	431
14.	ಧಾರವಾಡ	306
15.	ಉತ್ತರ ಕನ್ನಡ	839
16.	ಗುಲ್ಬರ್ಗಾ	51
17.	ರಾಯಚೂರು	66
18.	ಬೀದರ್	7
19.	ಬಳ್ಳಾರಿ	86
	ಒಟ್ಟು	13793

3. ಈ ಯೋಜನೆಯಡಿ ತೆಂಗು, ದ್ರಾಕ್ಷಿ, ಏಲಕ್ಕಿ, ಮಾವು, ಗೋಡಂಬಿ, ಸೀಬೆ, ಸಪೋಟ, ನಿಂಬೆ, ದಾಳಿಂಬೆ, ಅನಾನಸ್, ವಿಳ್ಳೆದೆಲೆ, ಮೆಣಸು, ಮಲ್ಲಿಗೆ, ಅಡಿಕೆ, ಗುಲಾಬಿ, ನರ್ಸರಿಗಳು, ಜೋಳ, ತಾಳೆ, ಬೆಳೆಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೆ, 19 ಜಿಲ್ಲೆಗಳಲ್ಲಿ ಒಟ್ಟು 13793 ಫಲಾನುಭವಿಗಳನ್ನು ಗುರುತ್ತಿಸಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಈ ಫಲಾನುಭವಿಗಳನ್ನು ಗುರುತಿಸುವುದಕ್ಕೆ ನೀವು ಯಾವ ರೀತಿಯಾದ ನೀತಿ ನಿಯಮಗಳನ್ನು ಅನುಸರಿಸುತ್ತಿದ್ದೀರಿ? ಆಯಾಯ ಜಿಲ್ಲೆಗಳಿಗೆ ಹೊಂದಿಕೊಂಡ ಹಾಗೆ ಈ ಕಾರ್ಯಕ್ರಮ ವಿಸ್ತಾರಗೊಂಡಿದೆ ಎಂದು ಹೇಳಿದ್ದೀರಿ, ಪ್ರತಿಯೊಂದು ಜಿಲ್ಲೆಗಳಲ್ಲಿ ನೀವು ಗುರುತಿಸಿರುವ ಫಲಾನುಭವಿಗಳ ಸಂಖ್ಯೆ ಏರುಪೇರಾಗಿದೆ. ತೋಟಗಾರಿಕೆ ಬೆಳೆಗಳ ಬಗ್ಗೆ ಅಭ್ಯಾಸ ಮಾಡುವುದಕ್ಕೆ ತಾವು ಇಸ್ರೇಲ್‌ಗೆ ಹೋಗಿ ಬಂದಿದ್ದೀರಿ, ಇಸ್ರೇಲ್‌ನಲ್ಲಿ ಡ್ರಿಪ್ ಇರಿಗೇಷನ್ ಬಹಳ ಪ್ರಸಿದ್ಧಯಾಗಿದೆ, ಡ್ರಿಪ್ ಇರಿಗೇಷನ್ ಮತ್ತು ಸ್ಪ್ರಿಂಕ್ಲರ್ ಮುಖಾಂತರ ತೋಟಗಾರಿಕೆ ಬೆಳೆಗಳನ್ನು ಹೆಚ್ಚು ಮಾಡುವುದಕ್ಕೆ ಡ್ರಿಪ್ ಇರಿಗೇಷನ್ ಪದ್ಧತಿಗಳನ್ನು ಅಳವಡಿಸತಕ್ಕಂಥ ಯೋಜನೆ ಸರ್ಕಾರಕ್ಕೆ ಇದೆಯೆ?

ಶ್ರೀ ಡಿ.ಟಿ. ಜಯಕುಮಾರ್:- ಸನ್ಮಾನ್ಯ ಅಧ್ಯಕ್ಷರೆ, ಮೂರು ವರ್ಷಗಳಲ್ಲಿ 13,793 ರೈತರಿಗೆ, ಸುಮಾರು 34,500 ಎಕರೆ ಪ್ರದೇಶಗಳಿಗೆ 56 ಕೋಟಿ 40 ಲಕ್ಷ ರೂಪಾಯಿಗಳ ಸಾಲವನ್ನು ಹಂಚಿದ್ದೇವೆ. ಇದರಲ್ಲಿ ಯಾವುದೇ ರೀತಿಯ ನಿಯಮ ಇಲ್ಲ. ಸಣ್ಣ ಮತ್ತು ಅತಿ ಸಣ್ಣ ರೈತ ಯಾವುದಾದರೂ ಬ್ಯಾಂಕ್ ಅಪ್ರೋಚ್ ಮಾಡಿದರೆ, ಅವರು ನಬಾರ್ಡ್ ಮೂಲಕ ಸಬ್ಸೀಡಿ ತೆಗೆದುಕೊಂಡು ಸಾಲವನ್ನು ಹಂಚುತ್ತಾರೆ. ನಮ್ಮ ಇಲಾಖೆಯಿಂದ ಮಣ್ಣನ್ನು ಟೆಸ್ಟ್ ಮಾಡುವುದು ಮತ್ತು ಗಿಡಗಳನ್ನು ಕೊಡತಕ್ಕಂಥ ಕಾರ್ಯವನ್ನು ಮಾಡುತ್ತೇವೆ. ಫಲಾನುಭವಿಗಳ ಆಯ್ಕೆಯಲ್ಲಿ ವೇರಿಯೇಷನ್ ಆಗಿರುವುದನ್ನು ಕೇಳಿದ್ದೀರಿ, ಇದರಲ್ಲಿ ಇಂಥ ಜಿಲ್ಲೆಗಳಿಗೆ ಇಷ್ಟೆ ಎಂದು ರಿಸ್ಟ್ರಿಕ್ಷನ್ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಯಾವುದೇ ರೈತರು ಬಂದು ಬ್ಯಾಂಕ್‌ನ್ನು ಅಪ್ರೋಚ್ ಮಾಡಿ ಸಾಲಕ್ಕೆ ಅವರು ಅರ್ಜಿಯನ್ನು ಹಾಕಿದರೆ, ಅವರೆಲ್ಲರಿಗೂ ಕೂಡ ಸಾಲವನ್ನು ಕೊಡುವಂಥ ಅವಕಾಶ ಇದೆ. ಇಸ್ರೇಲ್‌ಗೆ ಹೋಗಿ ಡ್ರಿಪ್ ಇರಿಗೇಷನ್ ಬಗ್ಗೆ ಹೇಳುವುದು ಬೇರೆ ಪ್ರಶ್ನೆಯಾಗುತ್ತದೆ, ನಾವು ಡ್ರಿಪ್ ಇರಿಗೇಷನ್‌ಗೆ ಈ ವರ್ಷ 19 ಕೋಟಿ ರೂಪಾಯಿಯನ್ನು ಕೊಟ್ಟಿದ್ದೇವೆ. ಅರ್ಜಿಯನ್ನು ಯಾರ್‍ಯಾರು ಹಾಕುತ್ತಾರೆ ಅವರೆಲ್ಲರಿಗೂ ಕೊಡುತ್ತೇವೆ. ಈ ಯೋಜನೆಯಲ್ಲಿ ಎಸ್‌ಸಿ/ಎಸ್‌ಟಿ ಮತ್ತು ಮಹಿಳೆಯರಿಗೆ 90 ಪರ್ಸೆಂಟ್ ಸಬ್ಸೀಡಿ ಮತ್ತು ಉಳಿದಂಥ ರೈತರಿಗೆ 70 ಪರ್ಸೆಂಟ್ ಸಬ್ಸೀಡಿಯನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಈ ಯೋಜನೆಯಲ್ಲಿ ಸಾಲ ಮಂಜೂರಾಗಿಲ್ಲ ಎಂದು ಯಾರೂ ಹೇಳಿಲ್ಲ. ಇವತ್ತು ಅರ್ಜಿಗಳು ಎಷ್ಟು ಬಂದಿವೆ ಅಷ್ಟಕ್ಕೂ ಸಾಲವನ್ನು ಮಂಜೂರು ಮಾಡಿದ್ದೇವೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಫಲಾನುಭವಿಗಳನ್ನು ಗುರುತಿಸತಕ್ಕಂಥ ಸಂದರ್ಭದಲ್ಲಿ ಹಲವಾರು ರೀತಿಯ ಸಮಸ್ಯೆಗಳು ಎದುರಾಗುತ್ತಿವೆ. ನೀವು ಸಣ್ಣ ಮತ್ತು ಅತಿ ಸಣ್ಣ ರೈತರು ಎಂದು ಹೇಳುತ್ತೀರಿ, ಆದರೆ ಕೆಲವರಿಗೆ ನೀರಾವರಿ ವ್ಯವಸ್ಥೆ ಇರುವುದಿಲ್ಲ ಮತ್ತೆ ಕೆಲವರಿಗೆ ಭೂಮಿಯ ತೊಂದರೆ ಇರುತ್ತದೆ, ಇಂಥ ಸಂದರ್ಭದಲ್ಲಿ ನೀರನ್ನು ಒದಗಿಸುವಂಥ ಸೌಲಭ್ಯವನ್ನು ಮಾಡಬೇಕು ಮತ್ತು ಫಲಾನುಭವಿಗಳ ಆಯ್ಕೆಯಲ್ಲಿ ಯಾವುದೇ ಜಿಲ್ಲೆಯಲ್ಲಿ ರಿಸ್ಟ್ರಿಕ್ಷನ್ ಇಲ್ಲ ಎಂದು ಹೇಳಿದ್ದೀರಿ. ಆದರೆ ನೀವು ಕೊಟ್ಟಿರತಕ್ಕಂಥ ಅಂಕಿ ಅಂಶದಲ್ಲಿ ಇಡೀ ಬೀದರ್ ಜಿಲ್ಲೆಗೆ 7 ಜನ ಮತ್ತು ಕೊಡಗು ಜಿಲ್ಲೆಯಲ್ಲಿ 109 ಜನರನ್ನು ಗುರುತಿಸಿದ್ದೀರಿ. ಕೊಡಗಿನಲ್ಲಿ ಏಲಕ್ಕಿ ಬೆಳೆಯನ್ನು ಅಧಿಕವಾಗಿ ಬೆಳೆಯತಕ್ಕಂಥ ಅವಕಾಶ ಇದೆ ಮತ್ತು ಇದಕ್ಕೆ ಸಾಲದ ವ್ಯವಸ್ಥೆ

ಇದ್ದರೂ ಕೂಡ ಕೇವಲ 109 ಜನ ಫಲಾನುಭವಿಗಳನ್ನು ಮಾತ್ರ ಗುರುತಿಸಿದ್ದೀರಿ, ಏಕೆ ಈ ರೀತಿ ಆಗಿದೆ?

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೆ, ಸಾಲವನ್ನು ಕೊಡತಕ್ಕಂಥದ್ದು ಬ್ಯಾಂಕ್ ಮತ್ತು ನಬಾರ್ಡ್ ಮುಖಾಂತರ, ಆದರೆ ನಮ್ಮ ಇಲಾಖೆಯಲ್ಲಿ ಹಲವಾರು ಸ್ಕೀಮ್‌ಗಳಿವೆ, ಇದರಿಂದ ಅನೇಕ ರೈತರು ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಉಚಿತವಾಗಿ ಮತ್ತು ಎಸ್‌ಸಿ / ಎಸ್‌ಟಿ ಸಬ್ಸೀಡಿ ಕೊಡತಕ್ಕಂಥದ್ದು ಇವೆಲ್ಲವೂ ಕೂಡ ಇದರಲ್ಲಿ ಬಂದಿಲ್ಲ. ಸಾಲಕ್ಕೆ ಸಂಬಂಧಪಟ್ಟಂತೆ ತಾವು ಕೇಳಿರುವ ಪ್ರಶ್ನೆಗೆಯಾಗಿರುವುದರಿಂದ ನಾವು ಸಾಲಕ್ಕೆ ಸಂಬಂಧಪಟ್ಟ ಹಣವನ್ನು ಮಾತ್ರ ಹೇಳಿದ್ದೇವೆ. ಇದಕ್ಕೆ ಯಾರು ಅರ್ಜಿಯನ್ನು ಹಾಕಿದ್ದಾರೆ ಅವರೆಲ್ಲರಿಗೂ ಕೂಡ ಸಾಲ ಪಡೆಯುವ ಅವಕಾಶ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ತೋಟಗಾರಿಕೆ ಮಂತ್ರಿಯವರು ಡ್ರಿಪ್ ಇರಿಗೇಷನ್ ಯಾವುದಾದರೂ ಒಂದು ಸ್ಪೆಸಿಫಿಕ್ ಕಂಪನಿಯವರಿಗೆ ಈ ವ್ಯವಸ್ಥೆಯನ್ನು ಮಾಡಲು ತಾವು ಹೇಳಬಾರದು. ರೈತರು ಎಷ್ಟು ಕಡಿಮೆ ದರದಲ್ಲಿ ಮತ್ತು ಅವರಿಗೆ ಬೇಕಾದ ಕಂಪನಿಯ ಮೂಲಕ ಡ್ರಿಪ್ ಇರಿಗೇಷನ್ ಮಾಡಿಸುತ್ತಾರೆ. ಇದರೆ ನೀವು ಸ್ಪೆಸಿಫಿಕ್ ಆಗಿ ಇಂಥ ಕಂಪನಿ ಎಂದು ಹೇಳಿದರೆ, ಅವವು ಹೇಳಿದಂಥ ದರವನ್ನು ಕೊಟ್ಟು ಮಾಡಿಸಿಕೊಳ್ಳಬಹುದಾದ ಪರಿಸ್ಥಿತಿ ಬರುತ್ತದೆ. ಆದುದರಿಂದ ಡ್ರಿಪ್ ಇರಿಗೇಷನ್ ವ್ಯವಸ್ಥೆಯನ್ನು ಮುಕ್ತವಾಗಿ ರೈತರು ಯಾವ ಕಂಪನಿಯ ಮುಖಾಂತರವಾದರು ಮಾಡಿಸಿಕೊಳ್ಳುವ ವ್ಯವಸ್ಥೆಯನ್ನು ತಾವು ಮಾಡಿಸಿಕೊಡಬೇಕು.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೆ, ರೈತರಿಗೆ ಅನ್ಯಾಯವಾಗಬಾರದು ಮತ್ತು ಮೋಸ ಆಗಬಾರದೆಂಬ ದೃಷ್ಟಿಯಿಂದ ನಾವು ಕೆಲವು ರಿಜಿಸ್ಟರ್ ಆಗಿರುವ ಕಂಪನಿಗಳ ಲಿಸ್ಟ್ ಮಾಡಿದ್ದೇವೆ. ರೈತರಿಗೆ ಈ ಕಂಪನಿಗಳಿಂದ ಕಳಪೆ ಪೈಪ್‌ಗಳನ್ನು ಕೊಟ್ಟರೆ ಆಗ ಇವರಿಗೆ ಪ್ರಶ್ನೆಯನ್ನು ಕೇಳಬಹುದು, ಆದರೆ ರೈತರು ಎಲ್ಲೋ ಬೇಕಾದರೆ ಕಡೆ ಕೊಂಡುಕೊಂಡರೆ ನಾವು ಅವರಿಗೆ ಕೇಳುವುದಕ್ಕೆ ಆಗುವುದಿಲ್ಲ. ಸೆಕೆಂಡ್ ಸ್ಟಾಂಡ್‌ರ್ಡ್ ಮತ್ತು ಸಬ್ ಸ್ಟಾಂಡ್‌ರ್ಡ್ ಪೈಪ್‌ಗಳನ್ನು ತಂದು ಅಳವಡಿಸುವಾಗ ನಾವು ಯಾರಿಗೆ ಕೇಳಬೇಕು? ಪ್ರೀಮಿಯರ್ ಇರಿಗೇಷನ್, ಜೈನ್ ಕಂಪನಿ ಇದೆ. ಕೆಲವು ಸಬ್ ಸ್ಟಾಂಡ್‌ರ್ಡ್ ಇದೆ, ರೈತ ಹೋಗಿ ಸಬ್ ಸ್ಟಾಂಡರ್ಡ್ ತೆಗೆದುಕೊಂಡರೆ ಕೊನೆಗೆ ರೈತನಿಗೆ ಅನ್ಯಾಯವಾಗುವುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಉದಾಹರಣೆಗೆ ಖಾಸಗಿ ಬೋರ್‌ವೆಲ್‌ನವರು 50 ರೂಪಾಯಿಗಳಿಂದ 60 ರೂಪಾಯಿಗಳವರೆಗೆ ಒಂದು ಮೊಟರ್ ಭೂಮಿಯನ್ನು ಕೊರೆದುಕೊಡುತ್ತಾರೆ. ಆದರೆ ಸರ್ಕಾರಿ ಬೋರ್‌ವೆಲ್‌ನಲ್ಲಿ ಒಂದು ಮೊಟರ್ ಭೂಮಿಯನ್ನು ಕೊರೆಯಲು 70 ರೂಪಾಯಿ ಹಾಕುತ್ತಾರೆ. ಆದ್ದರಿಂದ ನಾವು ಇಲ್ಲಿ ಏನು ನೆಗೋಶಿಯೇಷನ್ ಮಾಡಿರುತ್ತೇವೆ ಆ ರೇಟ್‌ನಲ್ಲಿ ಹಣ ಕೊಟ್ಟು ಪಡೆದುಕೊಳ್ಳಬೇಕಾಗುತ್ತದೆ. ನಾವು ಕ್ವಾಲಿಟಿ ತಿಳಿದುಕೊಂಡು ಉತ್ತಮವಾದಂಥ ಪೈಪ್‌ಗಳನ್ನು ಹಾಕಿಸಿಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಆದರೆ ನೀವು ಸ್ಪೆಸಿಫಿಕ್‌ಕ್ಕಾಗಿ ಹೇಳಿದರೆ ಅವನು ಹೇಳಿದ ರೇಟ್‌ನ್ನು ನಾವು ಕೊಡಬೇಕಾಗುತ್ತದೆ.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಕಳೆದ ಸಾರಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಡ್ರಿಪ್ ಇರಿಗೇಷನ್ ಮೊದಲನೇ ಬಾರಿಗೆ ಮಹಾರಾಷ್ಟ್ರದಲ್ಲಿ ಬಂದಿದ್ದು, ಆದ್ದರಿಂದ ಅದಕ್ಕೆ ಅನುಗುಣವಾಗಿ ನಾವು ರೇಟ್‌ನ್ನು ಫಿಕ್ಸ್ ಮಾಡಿದ್ದೇವೆ. ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸಿ, ಈ ಸಾರಿ ಏನಾದರೂ ಬದಲಾವಣೆ ಮಾಡಲು ಅವಕಾವ ಇದ್ದರೆ ದಯವಿಟ್ಟು ಮಾಡಿಕೊಡತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೇ ಈ ಡ್ರಿಪ್ ಇರಿಗೇಷನ್ ಸಬ್ಸಿಡಿ ರೈತರಿಗೆ ಎನೂ ಸಹಾಯ ಆಗುತ್ತಿಲ್ಲ ಎಜೆಂಟರ್ಸ್‌ಗೆ ಸಹಾಯವಾಗುತ್ತಿರುವುದು. ಅವರ ಹತ್ತಿರ ಏನು ಲಿಸ್ಟ್ ಇದೆ ಅದನ್ನು ಪರಿಷ್ಕರಣೆ ಮಾಡಬೇಕು. ಕನಿಷ್ಟ ಮೆಟೀರಿಯಲ್ಸ್ ಪರ್ಚೇಸ್ ಮಾಡಿಕೊಂಡು ಬಂದು ನಾವು ಡ್ರಿಪ್ ಇರಿಗೇಷನ್ ಮಾಡಿಕೊಳ್ಳುತ್ತೇವೆ ಎನ್ನುವವರಿಗಾದರೂ ನೀವು ಸಬ್ಸಿಡಿಯನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕು. ಅವನೇ ಬರಬೇಕು ಕಂಪ್ಲೆಯನ್ಸ್ ರಿಪೋರ್ಟ್‌ಕೊಡಬೇಕೆಂದು ಏನು ಮಾಡಿದ್ದೀರಿ ಮೊದಲು ಅದನ್ನೆಲ್ಲಾ ಈಗ ತೆಗೆದುಕೊಂಡು ಬಿಡುತ್ತಾನೆ ಎಜೆಂಟು. ಮಾರ್ಚ್ 10ನೇ ತಾರೀಖಿನಿಂದ 30ನೇ ತಾರೀಖಿನೊಳಗೆ ಸಬ್ಸಿಡಿಯನ್ನು ಡ್ರಾ ಮಾಡಿರುವುದು ಬಿಟ್ಟರೆ ರೈತರಿಗೆ ತಲುಪಿರುವುದು 20 ಪರ್ಸೆಂಟ್ ಅಥವಾ 30 ಪರ್ಸೆಂಟ್. ಕೆಲವು ಸಾರಿ ಅದು ಇಲ್ಲ. ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಹೇಳಿದ ರೀತಿಯಲ್ಲಿ ಇದನ್ನು ರಿಲ್ಯಾಕ್ಸ್ ಮಾಡಬೇಕು. ಅದಕ್ಕಿಂತ ತಾವು ಐ ಎಸ್ ಐ ಮೆಟರೀಯಲ್ಸ್ ತೆಗೆದುಕೊಂಡು ಬನ್ನಿ ಎಂದು ಹೇಳಿ. ರೈತರಿಗೆ ಅವಕಾಶ ಮಾಡಿಕೊಡುವುದು ಉತ್ತಮ ಎಂದು ನಾನು ಇಲ್ಲಿ ತಮಗೆ ಹೇಳಬಯಸುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವು ಲೋಪದೋಷಗಳು ಇದ್ದವು. ಇದನ್ನು ಸರಿ ಮಾಡಬೇಕೆಂದು ನಾವು ಎಜೆಂಟ್ಸ್‌ಗೆ ಚೆಕ್ ಕೊಡುತ್ತಿಲ್ಲ ದುಡ್ಡು ಕೊಡುತ್ತಿಲ್ಲ. ರೈತ ಬಂದು ಅವರಿಗೆ ಸಮಾಧಾನವಾಗಿ ಇಲ್ಲಾ ಅವರಿಗೆ ಕೊಡಬಹುದು ಅಂತ ಹೇಳಿದ ಮೇಲೆ ನಾವು ರೈತರ ಕೈಗೆ ಕೊಡುತ್ತಿದ್ದೇವೆಯೇ ಹೊರತು ಏಜೆಂಟ್ಸ್‌ಗೆ ಕೊಡುತ್ತಿಲ್ಲ ಸುಮಾರು 20-30 ಕಂಪನಿಗಳು ಇವೆ. ಅವರು ಯಾರ ಬಳಿ ಆದರೂ ತೆಗೆದುಕೊಳ್ಳಬಹುದು ಇಂತಹವರ ಹತ್ತಿರವೇ ತೆಗೆದುಕೊಳ್ಳಬೇಕೆಂದು ನಿಯಮ ಏನೂ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ಇವರು ಕೆಲವು ಕಂಪನಿಗಳ ಜೊತೆಗೆ ಏನು ಒಪ್ಪಂದ ಮಾಡಿಕೊಂಡಿದ್ದಾರೆ ಅವರು ಮಾಡಿದ ಕೆಲಸಕ್ಕಿಂತ ಹೆಚ್ಚು ಹಣವನ್ನು ಈಗಾಗಲೇ ಪಡೆದು ಆಗಿದೆ. ಕೋಟಿ ಗಟ್ಟಲೆ ಹಣ ಈ ಹೆಸರಿನಲ್ಲಿ ಲೂಟಿ ಆಗಿದೆ. ಯಾರಾದರೂ ಒಬ್ಬ ರೈತನ ಹೊಲದಲ್ಲಿ ಒಂದು ಎಕರೆಗೆ ಡ್ರಿಪ್ ಮಾಡಿ ಅದನ್ನು 10 ಎಕರೆ ಎಂದು ತಿದ್ದಿ ಸಾಕಷ್ಟು ಗೋಲ್ ಮಾಲ್ ಮಾಡಿ ಆಗಿದೆ ಇವರ ಅಧಿಕಾರಿಗಳು ಮತ್ತು ಎಜೆಂಟರು. ಆದ್ದರಿಂದ ರೈತರೇ ನೇರವಾಗಿ ಡ್ರಿಪ್ ಇರಿಗೇಷನ್ ಮಾಡಿಕೊಂಡರೆ ಅವರಿಗೆ ಸಬ್ಸಿಡಿ ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ. ಎಜೆಂಟರ್‌ಗಳನ್ನು ಮಧ್ಯವರ್ತಿಗಳನ್ನಾಗಿ ಮಾಡತಕ್ಕಂಥದ್ದು ಸರಿಯಲ್ಲ.

ಶ್ರೀ ಡಿ.ಟಿ ಜಯಕುಮಾರ್:- ಮಾನ್ಯ ಅಧ್ಯಕ್ಷರೇ, ನಿರ್ದಿಷ್ಟವಾಗಿ ಏಜೆಂಟ್ಸ್ ಇವರ ಹೆತ್ತಿರವೇ ತೆಗೆದುಕೊಳ್ಳಬೇಕು ಎಂಬ ರೂಲ್ಸ್ ಇಲ್ಲ. ರೈತರು ಯಾರ ಹತ್ತಿರ ಇಚ್ಛೆ ಪಡುತ್ತಾರೋ ಅವರ ಹತ್ತಿರ ತೆಗೆದುಕೊಳ್ಳಬಹುದು. ಅವರು ತೋಳಿದ ಹಾಗೆ ಕೆಲವು ಲೋಪದೋಷಗಳು ಆಗಿದ್ದು ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಮತ್ತು ಸಿಓಡಿ ವಿಚಾರಣೆಯನ್ನು ಸಹ ಮಾಡುತ್ತಿದ್ದೇವೆ. ಸುಮಾರು 20-30 ಜನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು ಈ ವಿಚಾರದಲ್ಲಿ ಕೆಲವು ಅಧಿಕಾರಿಗಳು ಸಸ್ಪೆಂಡ್ ಸಹ ಆಗಿದ್ದಾರೆ. ಸಾಕಷ್ಟು ಕ್ರಮ ತೆಗೆದುಕೊಂಡಿರುವುದರಿಂದ ಹಿಂದೆ ಆಗಿದ್ದಂತಹ ಲೋಪದೋಷಗಳು ಇನ್ನು ಮುಂದೆ ಆಗುವುದಿಲ್ಲ.

ನರಸಿಂಹರಾಜ ಕ್ಷೇತ್ರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮನೆಗಳ ನಿರ್ಮಾಣ

59 (96) ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜು):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರಸಿಂಹರಾಜ ಕ್ಷೇತ್ರದ ಗಾಂಧಿನಗರ, ಚಾಮುಂಡೇಶ್ವರಿ ಕೊಳಚೆ ಪ್ರದೇಶದಲ್ಲಿ ಮನೆಗಳು (ಹುಡ್ಕೋ ಸಾಲದ ಅವ್ಯಯವೂ ಅಥವಾ ಎನ್.ಸಿ.ಪಿ. ಸಾಲದ ವತಿಯಿಂದಲೋ) ಯಾವ ಯೋಜನೆಯಲ್ಲಿ ನಿರ್ಮಾಣವಾಗುತ್ತಿವೆ?

ಆ) ಈ ಮನೆಗಳಿಗೆ ತಗಲುವ ಅಂದಾಜು ವೆಚ್ಚವೆಷ್ಟು; ಕಟ್ಟಡ ನಿರ್ಮಿಸಲು ಗುತ್ತಿಗೆಯ ಟೆಂಡರ್ ಕರೆಯಲಾಗಿದೆಯೇ; ಕಾಮಗಾರಿ ಯಾವಾಗ ಪ್ರಾರಂಭವಾಗುವುದು?

ಇ) ಹಾಗಿದ್ದಲ್ಲಿ ಈ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ನರಸಿಂಹರಾಜ ಕ್ಷೇತ್ರದ ಗಾಂಧಿನಗರದ ಚಾಮುಂಡೇಶ್ವರಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ಅದೇ ಜಾಗದಲ್ಲಿ ಹುಡ್ಕೋ ಸಂಸ್ಥೆಯ ಸಾಲದ ನೆರವಿನೊಂದಿಗೆ 168 ಮನೆಗಳನ್ನು ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿದೆ.

ಆ) ಪ್ರತಿ ಮನೆಗೆ ಕ್3,5೨೫ ರೂ. ಗಳಂತೆ ಒಟ್ಟು ತಗಲಿಗುವ ಅಂದಾಜು ವೆಚ್ಚ 141.00 ಲಕ್ಷ ರೂ. ಗಳು ಈ ಅಂದಾಜು ಪಟ್ಟಿಗೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ಹಾಗೂ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆಯಲು ಸರ್ಕಾರದ ಖಾತರಿ ನೀಡಿದ ನಂತರ ಹಾಗೂ ಹುಡ್ಕೋ ಸಾಲ ಪಡೆದ ನಂತರ ಟೆಂಡರನ್ನು ಕರೆದು ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಮಂಡಳಿಯು ಈಗಾಗಲೇ ತನ್ನ ಅನುಮೋದನೆಯನ್ನು ನೀಡಿ, ಸರ್ಕಾರಕ್ಕೆ ಆಡಳಿತಾತ್ಮಕ ಮಂಜೂರಾತಿಗೆ ಪ್ರಸ್ತಾವನೆಯನ್ನು ಸಲ್ಲಿಸಿದೆ. ಆಡಳಿತಾತ್ಮಕ ಮಂಜೂರಾತಿ ಹಾಗೂ ಹುಡ್ಕೋ ಸಾಲಕ್ಕೆ ಸರ್ಕಾರಿ ಖಾತರಿ ನೀಡಿದ ಮೇಲೆ ಮಂಡಳಿ ಮುಂದಿನ ಕ್ರಮ ವಹಿಸುತ್ತಿದೆ.